B) The total PV cases reported during 2009 is 31,145 cases and PF is 5,685.

The **PV:PF** ratio is : **17:3**

C) There are no confirmed deaths due to Malaria during 2009 in the State.

D) The per capita expenditure on malaria during 2008-09 was Rs. 4.46.

E) The number of Man-days lost during 2008 due to complicated Malaria is : 1973 man days. No severe and complicated Malaria was reported during 2009 & hence there is no loss of man-days during this period.

F) The Government has not lost any income due to Malaria incidence. However, individual (personal) income loss can be calculated at a total of Rs. 2,36,760/-@ Rs. 120/- per man-day during 2008. No personal income loss is estimated for 2009, as there were only uncomplicated malaria cases during 2009.

ಮಡಿಲು ಕಿಟ್ಟು ಔಷಧಿಗಳ ಲಭ್ಯತೆ

850 (1293) ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ವಿಧಾನಸಭಾ ಕ್ಷೇತ್ರದಲ್ಲಿ, ವಿಜಾಪುರ ಜಿಲ್ಲೆಯಲ್ಲಿ ಮತ್ತು ರಾಜ್ಯದಲ್ಲಿ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಬಡತನ ರೇಖೆಗಿಂತ ಕೆಳಗೆ ಇರುವ ಎಷ್ಟು ಗರ್ಭಿಣಿ ಸ್ತ್ರೀಯರನ್ನು ನೋಂದಣಿ ಮಾಡಲಾಗಿದೆ.

ಆ) ಹಾಗಿದ್ದಲ್ಲಿ, ಇದರಲ್ಲಿ ಎಷ್ಟು ಫಲಾನುಭವಿಗಳಿಗೆ ಪ್ರೋತ್ಸಾಹ ಧನ ಮತ್ತು ಮಡಿಲು ಕಿಟ್ ನೀಡಲಾಗಿದೆ;

ಇ) ಕಳೆದ 6 ತಿಂಗಳಿನಿಂದ ಫಲಾನುಭವಿಗಳಿಗೆ ಮಡಿಲು ಕಿಟ್ ಮತ್ತು ಪ್ರೋತ್ಸಾಹ ಧನ ನೀಡದಿರಲು ಕಾರಣವೇನು;

ಈ) ಇವರಿಗೆ ಮಡಿಲು ಕಿಟ್ ಮತ್ತು ಪ್ರೋತ್ಸಾಹ ಧನ ಯಾವಾಗ ನೀಡಲಾಗುವುದು;

ಉ) ರಾಜ್ಯದ ಆಸ್ಪತ್ರೆಗಳಲ್ಲಿ ತಾಲ್ಲೂಕು ಆರೋಗ್ಯ ಕೇಂದ್ರಗಳಲ್ಲಿ Safe disposable delivery kits, Urosac bag, Spinal needle, Chromic Catagt No.2, Misopristal ಮಾತ್ರೆಗಳು, Calcium ಮಾತ್ರೆಗಳು, B.Complex ಮಾತ್ರೆಗಳ ದಾಸ್ತಾನು ಎಷ್ಟಿದೆ;

ಊ) ಈ ಪರಿಕರ ಮತ್ತು ಔಷಧಿಗಳು ಲಭ್ಯವಿಲ್ಲದಿದ್ದಲ್ಲಿ, ಅವು ಎಂದಿನಿಂದ ಲಭ್ಯವಿಲ್ಲ ಮತ್ತು ಅವುಗಳನ್ನು ಎಂದು ಪೂರೈಕೆ ಮಾಡಲಾಗುತ್ತದೆ?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಪ್ರಸಕ್ತ ಸಾಲಿನಲ್ಲಿ ನೊಂದಣಿಯಾಗಿರುವ ಬಡತನ ರೇಖೆಗಿಂತ ಕೆಳಗಿರುವ ಗರ್ಭಿಣಿ ಸ್ತ್ರೀಯರ ಸಂಖ್ಯೆ:

ಇಂಡಿ ವಿಧಾನ ಸಭಾ ಕ್ಷೇತ್ರ	ಬಿಜಾಪುರ ಜಿಲ್ಲೆ	ರಾಜ್ಯ
1731	13123	3.5 ಲಕ್ಷ

ಆ)

	ಇಂಡಿ ವಿಧಾನ ಸಭಾ ಕ್ಷೇತ್ರ	ಬಿಜಾಪುರ ಜಿಲ್ಲೆ	ರಾಜ್ಯ
ಪ್ರಸೂತಿ ಆರೈಕೆ	1310	10964	175122
ಮಡಿಲು ಕಿಟ್	1088	7966	204941

ಇ) ಮತ್ತು ಈ) ದಿನಾಂಕ: 01/10/2007 ರಿಂದ ಬಾಣಂತಿಯರಿಗೆ ಮಡಿಲು ಕಿಟ್ ನೀಡುವ ಯೋಜನೆ ಜಾರಿಯಲ್ಲಿದೆ, ಈವರೆಗೆ ಒಟ್ಟು 4.93 ಲಕ್ಷ ಮಡಿಲು ಕಿಟ್‌ಗಳನ್ನು ಖರೀದಿಸಿ ಎಲ್ಲಾ ಜಿಲ್ಲೆಗಳಿಗೆ ಸರಬರಾಜು ಮಾಡಲಾಗಿದೆ. ಮಡಿಲು ಕಿಟ್‌ಗಳ ದಾಸ್ತಾನು ಕುರಿತಂತೆ ಇತ್ತೀಚೆಗೆ ಸ್ವಲ್ಪ ವ್ಯತ್ಯಯ ಉಂಟಾಗಿದ್ದನ್ನು ಸರಿಪಡಿಸಿ ಅಗತ್ಯವಿರುವ ಕಿಟ್‌ಗಳನ್ನು ಪೂರೈಸಲಾಗುತ್ತಿದೆ. ಮುಂದುವರೆದು, 2010–11 ನೇ ಸಾಲಿನಲ್ಲಿ ಜೂನ್

ತಿಂಗಳವರೆಗೆ ಅಗತ್ಯವಿರುವ ಮಡಿಲು ಕಿಟ್‌ಗಳನ್ನು ಸರಬರಾಜು ಮಾಡಲು ಈಗಾಗಲೇ ಖರೀದಿ ಆದೇಶ ನೀಡಲಾಗಿದೆ.

ಪ್ರೋತ್ಸಾಹ ಧನ ಬಿಡುಗಡೆಯಲ್ಲೂ ಸಹ ಸ್ವಲ್ಪ ವಿಳಂಬವಾಗಿದ್ದು, ಈಗ ಅದನ್ನು ಸರಿಪಡಿಸಲಾಗುತ್ತಿದೆ.

ಊ) ಈ ಔಷಧಿಗಳ ದಾಸ್ತಾನು ಇರುವುದಿಲ್ಲ.

ಋ) ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಗೂ ತಾಲ್ಲೂಕು ಆರೋಗ್ಯ ಕೇಂದ್ರಗಳಲ್ಲಿ ಸುರಕ್ಷಿತ ಹೆರಿಗೆ ಮಾಡಲು ಅವಶ್ಯ ಇರುವ ಎಲ್ಲಾ ಪರಿಕರಗಳು ಲಭ್ಯವಿದೆ. ಉಳಿದಂತೆ ದಾಸ್ತಾನು ಇಲ್ಲದಿರುವ ಔಷಧಿಗಳನ್ನು ಎನ್.ಆರ್. ಹೆಚ್.ಎಂ. ಅಡಿಯಲ್ಲಿ ಒದಗಿಸಿರುವ ಮುಕ್ತ ನಿಧಿಯಿಂದ ಖರೀದಿಸಿ ಒದಗಿಸಿ ಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ವೈದ್ಯಕೀಯ ಶಿಕ್ಷಣಕ್ಕೆ ಧನ ಸಹಾಯ

851 (99) ಡಾ: ಹೆಚ್.ಸಿ. ಮಹದೇವಪ್ಪ (ಟಿ. ನರಸೀಪುರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ರೂ.25000–00ಗಳ ಸಹಾಯ ಧನ ನೀಡಲಾಗುವುದೇ;

ಆ) ಸರ್ಕಾರ ಘೋಷಿಸಿದ ದರದ ಅನ್ವಯ 2006–07ನೇ ಸಾಲಿನಲ್ಲಿ ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ರೂ.25000–00ಗಳ ಸಹಾಯ ಧನ ಪಾವತಿಸಲಾಗಿದೆಯೇ;

ಇ) ಈ ಬಗ್ಗೆ ಸರ್ಕಾರದ ಮುಂದಿನ ಕ್ರಮವೇನು?

ಶ್ರೀ ರಾಮಚಂದ್ರಗೌಡ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ರೂ.25,000/– ಗಳ ಸಹಾಯ ಧನ ನೀಡುವ ಸರ್ಕಾರದ ನೀತಿ ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಇಲ್ಲ. ಆದರೆ, 2006–07ನೇ ಸಾಲಿನಲ್ಲಿ ಎಂಬಿಬಿಎಸ್ ಮತ್ತು ಬಿಡಿಎಸ್ ವ್ಯಾಸಂಗಗಳಿಗೆ ಸಿ.ಇ.ಟಿ. ಮೂಲಕ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ಕ್ರಮವಾಗಿ ರೂ.90,000 ಮತ್ತು ರೂ.80,000 ಗಳ ವಾರ್ಷಿಕ ರಿಯಾಯಿತಿ ನೀಡುವ ನೀತಿ ಇದೆ.